| ಪ್ರಶ್ನೆಪುಸ್ತಿಕೆಯ ಸಂಖ್ಯೆ Q.P. Booklet Sl.No. |
|---|
| |

ನೋಂದಣಿ ಸಂಖ್ಯೆ : Register Number :

| | | | | | | | | | | |
|---|---|---|---|---|---|---|---|---|---|---|
| | | | | | | | | | | |

Tear here

# ಎಸ್.ಎಸ್.ಎಲ್.ಸಿ ಮುಖ್ಯ ಪರೀಕ್ಷೆ – 2021

## S.S.L.C MAIN EXAMINATION – 2021

## ಪತ್ರಿಕೆ / Paper – 02

**ವಿಷಯ : ಪ್ರಥಮ ಭಾಷೆ + ದ್ವಿತೀಯ ಭಾಷೆ + ತೃತೀಯ ಭಾಷೆ / ಎನ್.ಎಸ್.ಕ್ಯೂ.ಎಫ್**

**Subjects : First Language + Second Language + Third Language / NSQF**

**(CCERF/CCERR/CCEPF/CCEPR/NSR/NSPR)**

**ಸಮಯ : ಬೆಳಗ್ಗೆ 10.30 ರಿಂದ ಮಧ್ಯಾಹ್ನ 01.30ರವರೆಗೆ]** **[Time : 10.30 A.M to 01.30 P.M**

**ಒಟ್ಟು ಪ್ರಶ್ನೆಗಳ ಸಂಖ್ಯೆ : 40+40+40=120]** **[Total No. of Questions : 40+40+40=120**

**ಗರಿಷ್ಠ ಅಂಕಗಳು : 40+40+40=120]** **[Max.Marks : 40+40+40=120**

## ಪ್ರಥಮ ಭಾಷೆ / First Language – 01K - ಕನ್ನಡ / Kannada

## ವಿದ್ಯಾರ್ಥಿಗಳಿಗೆ ಸೂಚನೆಗಳು / Instructions to Students

1. ಪ್ರವೇಶ ಪತ್ರದಲ್ಲಿನ ಹನ್ನೊಂದು ಅಂಕಿಗಳ ನೋಂದಣಿ ಸಂಖ್ಯೆಯನ್ನು ಪ್ರಶ್ನೆಪುಸ್ತಿಕೆಯ ಬಲಪಾರ್ಶ್ವದ ಮೇಲ್ತುದಿಯಲ್ಲಿ ಸ್ಪಷ್ಟವಾಗಿ ಬರೆಯಿರಿ.

   Write your eleven digits Register Number on the Question Paper as allotted in the admission ticket in the space provided at the top right corner of this front page.

2. ಈ ಪ್ರಶ್ನೆಪತ್ರಿಕೆಯನ್ನು ಹಿಮ್ಮುಖ ಜಾಕೆಟ್ ಮೂಲಕ ಮೊಹರು/ಸೀಲ್ ಮಾಡಲಾಗಿದೆ. ಪರೀಕ್ಷೆ ಪ್ರಾರಂಭವಾಗುವ ಸಮಯಕ್ಕೆ ನಿಮ್ಮ ಪ್ರಶ್ನೆಪತ್ರಿಕೆಯ ಬಲಬದಿಯ ಪಾರ್ಶ್ವವನ್ನು ಕತ್ತರಿಸಿ ಪ್ರಶ್ನೆಪತ್ರಿಕೆಯಲ್ಲಿ ಎಲ್ಲಾ ಪುಟಗಳು ಇವೆಯೇ ಎಂದು ಪರೀಕ್ಷಿಸಿಕೊಳ್ಳಿ.

   This question paper has been sealed by reverse jacket. You have to cut on the right side to open the Question Paper at the time of commencement of the examination. Check whether all the pages of the question paper are intact.

3. ವಿಷಯವಾರು O.M.R ಪುಟವನ್ನು ಪ್ರತ್ಯೇಕವಾಗಿ ನೀಡಲಾಗುವುದು.

   O.M.R Sheet will be provided subject wise separately.

TEAR HERE TO OPEN THE QUESTION BOOKLET

ಪ್ರಶ್ನೆಪುಸ್ತಿಕೆಯನ್ನು ತೆರೆಯಲು ಇಲ್ಲಿ ಕತ್ತರಿಸಿ

ಇಲ್ಲಿಂದ ಕತ್ತರಿಸಿ

4. ಈ ಪ್ರಶ್ನೆಪತ್ರಿಕೆಯು ಮೂರು ಭಾಷಾ ವಿಷಯಗಳನ್ನು ಹೊಂದಿದ್ದು, ಪ್ರತಿ ವಿಷಯವೂ ಪ್ರತ್ಯೇಕವಾದ ಪುಸ್ತಿಕೆಯನ್ನು ಹೊಂದಿದೆ.

   This Question Paper consists of three languages and each language has separate question booklet.

5. ಪ್ರತಿ ವಿಷಯಕ್ಕೆ 40 ಪ್ರಶ್ನೆಗಳಿದ್ದು, ಈ ಪ್ರಶ್ನೆಪತ್ರಿಕೆಯು ಒಟ್ಟು 120 ಪ್ರಶ್ನೆಗಳನ್ನು ಹೊಂದಿದೆ.

   (i) ಪ್ರಥಮ ಭಾಷೆ – ಪ್ರಶ್ನೆಗಳ ಕ್ರಮಸಂಖ್ಯೆ 01 ರಿಂದ 40

   (ii) ದ್ವಿತೀಯ ಭಾಷೆ – ಪ್ರಶ್ನೆಗಳ ಕ್ರಮಸಂಖ್ಯೆ 41 ರಿಂದ 80

   (iii) ತೃತೀಯ ಭಾಷೆ / ಎನ್.ಎಸ್.ಕ್ಯೂ.ಎಫ್ – ಪ್ರಶ್ನೆಗಳ ಕ್ರಮಸಂಖ್ಯೆ 81 ರಿಂದ 120

   40 Questions are provided against each subject. This question paper contains 120 questions in all.

   (i) First Language – Question No 01 To 40

   (ii) Second Language – Question No 41 To 80

   (iii) Third Language / NSQF– Question No 81 To 120

6. ಪ್ರತಿ ಪ್ರಶ್ನೆಗೆ ಒಂದು ಅಂಕವಿದ್ದು, ಎಲ್ಲಾ ಪ್ರಶ್ನೆಗಳಿಗೂ ಉತ್ತರಿಸುವುದು ಕಡ್ಡಾಯ ಹಾಗೂ ಪ್ರತಿ ಸರಿಯಾದ ಉತ್ತರಕ್ಕೆ ಒಂದು ಅಂಕವಿದ್ದು, ತಪ್ಪಾದ ಉತ್ತರಕ್ಕೆ ಯಾವುದೇ ಋಣಾತ್ಮಕ ಅಂಕಗಳು ಇರುವುದಿಲ್ಲ.

   Each question carries one mark. Answering all the questions is compulsory and each correct answer will be awarded one mark. There will be no negative marking for wrong answers.

7. ಪರೀಕ್ಷಾ ಅವಧಿಯಲ್ಲಿ,

   ಎ) ಪ್ರಶ್ನೆಗಳನ್ನು ಜಾಗರೂಕತೆಯಿಂದ ಓದಿರಿ.

ಬಿ) ಓ.ಎಂ.ಆರ್. (OMR) ಪುಟದಲ್ಲಿ ಪ್ರತಿ ಪ್ರಶ್ನೆಸಂಖ್ಯೆಗೆ ಸರಿ ಹೊಂದುವ ಉತ್ತರವನ್ನು ಗುರುತಿಸಲು ನೀಡಲಾಗಿರುವ ನಾಲ್ಕು ವೃತ್ತಗಳ ಪೈಕಿ ಸರಿಯಾದ ಉತ್ತರದ ಒಂದು ವೃತ್ತವನ್ನು ನೀಲಿ/ಕಪ್ಪು ಶಾಯಿಯ ಬಾಲ್ ಪಾಯಿಂಟ್ ಪೆನ್ ಮಾತ್ರ ಉಪಯೋಗಿಸಿ ಸಂಪೂರ್ಣವಾಗಿ ಶೇಡ್ ಮಾಡಿ. ಒಮ್ಮೆ ಉತ್ತರವನ್ನು ಶೇಡ್ ಮಾಡಿದ ಮೇಲೆ ಬದಲಾಯಿಸಲು ಅವಕಾಶವಿಲ್ಲ ಮತ್ತು ಯಾವುದೇ ಅನಗತ್ಯ ಗುರುತುಗಳನ್ನು ಓ.ಎಂ.ಆರ್. (OMR) ಮೇಲೆ ಮಾಡಬಾರದು.

ಉದಾಹರಣೆ: ಪ್ರಶ್ನೆ ಸಂಖ್ಯೆ 20ಕ್ಕೆ ಉತ್ತರದ ಆಯ್ಕೆ ಸಂಖ್ಯೆ C ಆಗಿದ್ದಲ್ಲಿ, ಓ.ಎಂ.ಆರ್. (OMR) ಪುಟದಲ್ಲಿ ಆಯ್ಕೆ C ಯನ್ನು ನೀಲಿ/ಕಪ್ಪು ಬಾಲ್ ಪಾಯಿಂಟ್ ಪೆನ್ ಉಪಯೋಗಿಸಿ ಈ ಕೆಳಗೆ ತೋರಿಸಿದಂತೆ ವೃತ್ತವನ್ನು ಸಂಪೂರ್ಣವಾಗಿ ಶೇಡ್ ಮಾಡಬೇಕು.

ಪ್ರಶ್ನೆ ಸಂಖ್ಯೆ : 20) A B Ⓒ D (ಇದು ಉದಾಹರಣೆಗೆ ಮಾತ್ರ)

○○●○

ಸಿ) ಓ.ಎಂ.ಆರ್ ಹಾಳೆಯನ್ನು ಮಡಚುವುದು, ಹರಿಯುವುದು ಅಥವಾ ಸ್ಟೇಪಲ್ ಪಿನ್ ಮಾಡಬಾರದು.

During the examination,

a) Read the questions carefully.

b) Completely darken/shade the relevant oval against Question No. in the OMR answer sheet using blue/black ball point pen. Do not try to alter the entry and not to do any stray marks on OMR Sheet.

Example: In the question booklet, if <u>C</u> is the correct answer for <u>Question No.20</u>, then in the OMR sheet, shade the <u>option C</u> using blue/black ball point pen as follows.

Question No. : 20) A B Ⓒ D (This is an example only)

○○●○

c) Do not fold, tear, wrinkle or staple on the OMR Sheet.

8. ಒಂದು ಪ್ರಶ್ನೆಗೆ ಒಂದಕ್ಕಿಂತ ಹೆಚ್ಚು ವೃತ್ತಗಳನ್ನು ಶೇಡ್ ಮಾಡಿದಲ್ಲಿ ಅಂತಹ ಉತ್ತರಗಳನ್ನು ತಪ್ಪೆಂದು ಪರಿಗಣಿಸಿ ಅಂಕಗಳನ್ನು ನೀಡಲಾಗುವುದಿಲ್ಲ.

   If more than one oval is shaded for a given question, such answer is treated as wrong and no marks will be given.

9. ಓ.ಎಂ.ಆರ್. (OMR) ಪುಟದಲ್ಲಿ ನಿಗದಿತ ಸ್ಥಳದಲ್ಲಿ ವಿದ್ಯಾರ್ಥಿ ಹಾಗೂ ಕೊಠಡಿ ಮೇಲ್ವಿಚಾರಕರು ತಪ್ಪದೇ ಸಹಿ ಮಾಡಬೇಕು.

   Student and Room Invigilator should sign in the OMR sheet in the space provided.

10. ಪರೀಕ್ಷಾ ಅವಧಿ ಮುಗಿದ ನಂತರ ವಿಷಯವಾರು ಉತ್ತರಿಸಿದ ಓ.ಎಂ.ಆರ್ (OMR)ನ್ನು ಕೊಠಡಿ ಮೇಲ್ವಿಚಾರಕರಿಗೆ ತಪ್ಪದೇ ಒಪ್ಪಿಸಬೇಕು.

    Candidate should return the subject wise answered OMR sheet to the Room Invigilator before leaving the examination hall.

11. ಕಚ್ಚಾಕಾರ್ಯವನ್ನು ಪ್ರಶ್ನೆಪುಸ್ತಿಕೆಯ ಕೊನೆಯಲ್ಲಿ ನೀಡಿರುವ ಕಚ್ಚಾಕಾರ್ಯದ ಹಾಳೆಯಲ್ಲಿಯೇ ಮಾಡುವುದು.

    Rough work can be done in the space provided at the end of the Question Booklet.

12. ಪರೀಕ್ಷಾ ಕೊಠಡಿಯೊಳಗೆ ಕ್ಯಾಲ್ಕುಲೇಟರ್, ಮೊಬೈಲ್ ಫೋನ್ ಮತ್ತು ಇತರೆ ಯಾವುದೇ ಎಲೆಕ್ಟ್ರಾನಿಕ್ ಉಪಕರಣಗಳನ್ನು ತರುವುದನ್ನು ನಿಷೇಧಿಸಲಾಗಿದೆ.

    The Calculator, mobiles and any other electronic equipment are not allowed inside the examination hall.

# ಪ್ರಥಮ ಭಾಷೆ ಕನ್ನಡ

**ಈ ಕೆಳಗಿನ ಪ್ರತಿಯೊಂದು ಪ್ರಶ್ನೆಗಳಿಗೆ/ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಆಯ್ಕೆಗಳನ್ನು ನೀಡಲಾಗಿದೆ. ಅವುಗಳಲ್ಲಿ ಸರಿಯಾದ ಉತ್ತರವನ್ನು ಆರಿಸಿ ನಿಮಗೆ ನೀಡಿರುವ ಓ.ಎಂ.ಆರ್. ಉತ್ತರ ಪತ್ರಿಕೆಯಲ್ಲಿ ಕಪ್ಪು/ನೀಲಿ ಬಾಲ್ ಪಾಯಿಂಟ್ ಪೆನ್ನಿನಿಂದ ಶೇಡ್ ಮಾಡಿರಿ.** **[40×1=40]**

**1) ನಾನು ಯುದ್ಧ ಮಾಡುವ ಮೂರ್ಖರ ಕಡೆಯವನಲ್ಲ ಈ ಹೇಳಿಕೆಯ ಮುಂದುವರಿದ ಭಾಗ**

A) ಅಮ್ಮಾ, ನಾನೋರ್ವ ಡಾಕ್ಟರ್

B) ಸಂಕಷ್ಟಕ್ಕೀಡಾದ ಮನುಷ್ಯರ ಕಡೆಯವನು

C) ಅಮ್ಮಾ ಬಾಗಿಲು ತೆಗೆಯಿರಿ

D) ನನ್ನ ಹುಡುಗಿಗೊಮ್ಮೆ ಹೆರಿಗೆಯಾದರೆ ಸಾಕಾಗಿತ್ತು

**2) ವಿಶ್ವೇಶ್ವರಯ್ಯನವರ ಪ್ರಾಥಮಿಕ ಶಿಕ್ಷಣ ನಡೆದ ಸ್ಥಳ**

A) ಚಿಕ್ಕಬಳ್ಳಾಪುರ B) ಮುದ್ದೇನಹಳ್ಳಿ

C) ಮೋಕ್ಷಗೊಂಡಂ D) ಬೆಂಗಳೂರು

**3) ಮನೆಮಂಚಮ್ಮ ಕಥೆ ಹೇಳಿದ ಕವಿ**

A) ಫ. ಗು. ಹಳಕಟ್ಟಿ

B) ದೇವನೂರ ಮಹಾದೇವ

C) ಡಾ॥ ಅಶೋಕ ಪೈ

D) ಸಿದ್ಧಲಿಂಗಯ್ಯ

**4) ಹುಲಿಗೆ ಪರಮಾನಂದವಾದುದು ಈ ಕಾರಣದಿಂದ**

A) ಖಿರ್ದಿಪುಸ್ತಕ ನೋಡಿ

B) ಶಾನುಭೋಗರ ದುಂಡುದುಂಡಾದ ಶರೀರವನ್ನು ನೋಡಿ

C) ಶಾನುಭೋಗರು ಬೆನ್ನು ತಿರುಗಿಸಿ ನಡೆಯುತ್ತಿರುವುದನ್ನು ನೋಡಿ

D) ಎತ್ತುಗಳ ಘಂಟೆಯ ಶಬ್ದವನ್ನು ಕೇಳಿ

**5) ಯುದ್ಧ ಪಾಠದ ಆಶಯ**

A) ಸಂಕಷ್ಟದಲ್ಲಿದರೂ ವೈರಿ–ಮಿತ್ರ ಎಂದು ನೋಡದೆ ಸಹಾಯ ಮಾಡದೆ ಇರುವುದು

B) ಸಂಕಷ್ಟದಲ್ಲಿ ವೈರಿ–ಮಿತ್ರ ಎಂದು ನೋಡದೆ ಪರಸ್ಪರ ಸಹಕಾರದೊಂದಿಗೆ ಮಾನವೀಯ ಮೌಲ್ಯ ಎತ್ತಿ ಹಿಡಿಯುವುದು

C) ಜೀವನದಲ್ಲಿ ಧನಾತ್ಮಕ ಭಾವನೆಯ ದೃಢ ಸಂಕಲ್ಪ ಹೊಂದಿರಬೇಕೆಂದು ಹೇಳಿರುವುದು

D) ವ್ಯಕ್ತಿಯು ಸಮಾಜಮುಖಿಯಾಗಿ ಲಭಿಸಿದ ಅಧಿಕಾರವನ್ನು ಬಳಕೆ ಮಾಡಿಕೊಳ್ಳಬೇಕೆಂದು ಹೇಳಿರುವುದು

**6) ಸೂರ್ಯನೇ ತೇಜಗೆಡೆ ತೇಜಕೆಡೆಯಾರು? ರಾಮನೇ ಧೈರ್ಯಗೆಡೆ ಸ್ಥೈರ್ಯಕೆಡೆಯಾರು? ಎಂದು ರಾಮನನ್ನು ಸಂತೈಸಿದವರು**

A) ಲಕ್ಷ್ಮಣ

B) ಶಬರಿ

C) ದನು

D) ಮತಂಗ

**7) ನಾಲ್ವಡಿ ಕೃಷ್ಣರಾಜ ಒಡೆಯರು ಪಟ್ಟಾಭಿಷಿಕ್ತರಾದ ವರ್ಷ**

A) 1895 B) 1902

C) 1897 D) 1898

**8) ಮನೆಮಂಚಮ್ಮ ಇಂದು ಪೂಜಿತಳಾಗುತ್ತಿರುವ ಸ್ಥಳ**

A) ದೇವಸ್ಥಾನ B) ಚಾವಣಿಯಿಲ್ಲದ ಗುಡಿ

C) ಜನರ ಮನಸ್ಸಿನಲ್ಲಿ D) ಗ್ರಾಮಸ್ಥರ ಮನೆಗಳಲ್ಲಿ

**9) ಶಾನುಭೋಗರು ಈ ಕಾರಣಕ್ಕಾಗಿ ಚಿಕ್ಕನಾಯಕನ ಹಳ್ಳಿಗೆ ಹೋಗಿದ್ದರು**

A) ಇರಸಾಲಿಗಾಗಿ B) ವ್ಯಾಪಾರಕ್ಕಾಗಿ

C) ನ್ಯಾಯ ತೀರ್ಮಾನಕ್ಕಾಗಿ D) ವಿಹಾರಕ್ಕಾಗಿ

**10) 'ಕರ್ನಾಟಕ ಪಂಚತಂತ್ರ' ಎಂಬ ಚಂಪೂಕಾವ್ಯದ ಕರ್ತೃ**

A) ಗುಣಾಢ್ಯ B) ದುರ್ಗಸಿಂಹ

C) ಪಂಪ D) ರನ್ನ

**11) ದುಷ್ಟಬುದ್ಧಿಯ ತಂದೆ**

A) ಧರ್ಮಬುದ್ಧಿ B) ಪ್ರೇಮಮತಿ

C) ಸತ್ಯಮತಿ D) ದುರ್ಬುದ್ಧಿ

**12) ಪುರೋಹಿತ ತಿರುನಾರಾಯಣಯ್ಯಂಗಾರ್ಯ ನರಸಿಂಹಾಚಾರ್ ಅವರ ಕಾವ್ಯನಾಮ**

A) ಅಂಬಿಕಾತನಯದತ್ತ

B) ಕುವೆಂಪು

C) ಪು. ತಿ. ನ

D) ಡಿ. ವಿ. ಜಿ

**13) ಜಿ.ಎಸ್. ಶಿವರುದ್ರಪ್ಪ ಅವರು ಬರಡಾಗಿರುವ ಕಾಡುಮೇಡುಗಳನ್ನು ಹೀಗೆ ಮುಟ್ಟೋಣ ಎಂದಿದ್ದಾರೆ.**

A) ಕನಸನು ಬಿತ್ತುತ

B) ಸೇತುವೆಯಾಗುತ

C) ಹಣತೆಯ ಹಚ್ಚುತ

D) ವಸಂತವಾಗುತ

**14) ದತ್ತಾತ್ರೇಯ ರಾಮಚಂದ್ರ ಬೇಂದ್ರೆಯವರ ಜನ್ಮಸ್ಥಳ**

A) ಮೈಸೂರು

B) ಬೆಂಗಳೂರು

C) ಶಿವಮೊಗ್ಗ

D) ಧಾರವಾಡ

**15) 'ಹಲಗಲಿ ಬೇಡರು' ಪದ್ಯದ ಕಂಠಪಾಠ ಸಾಲಿನ ಸರಿಯಾದ ರೂಪ.**

A) ಅತ್ತು ವರ್ಣಿಸಿ ಹಾಳಾಗಿ ಹೋಯಿತು ಹೇಳಲಿ ನಾನೆಷ್ಟಾ

B) ಹೋಯಿತು ಹಾಳಾಗಿ ವರ್ಣಿಸಿ ಹೇಳಲಿ ಅತ್ತು ನಾನೆಷ್ಟಾ

C) ಹಾಳಾಗಿ ಹೋಯಿತು ಅತ್ತು ವರ್ಣಿಸಿ ಹೇಳಲಿ ನಾನೆಷ್ಟಾ

D) ಹೇಳಲಿ ವರ್ಣಿಸಿ ಹಾಳಾಗಿ ಹೋಯಿತು ಅತ್ತು ನಾನೆಷ್ಟಾ

**16) ತಂದೆ–ತಾಯಿಯರ ಸಲಹೆಯಂತೆ ಭೀಷ್ಮರ ಬಳಿ ಸಲಹೆ ಕೇಳಿ ಬಂದವನು :**

A) ಭೀಮ B) ಕರ್ಣ

C) ಅರ್ಜುನ D) ದುರ್ಯೋಧನ

**17) ಕುವೆಂಪುರವರ ಆತ್ಮಕಥನ**

A) ಪ್ರೇಮಕಾಶ್ಮೀರ B) ಪಕ್ಷಿಕಾಶಿ

C) ಶ್ರೀರಾಮಾಯಣ ದರ್ಶನಂ D) ನೆನಪಿನ ದೋಣಿಯಲ್ಲಿ

**18) ಸೂರ್ಯದೇವನ ಅನುಗ್ರಹದಿಂದ ಜನಿಸಿದವನು**

A) ಕರ್ಣ B) ಅರ್ಜುನ

C) ಭೀಮ D) ಧರ್ಮರಾಯ

**19) ಕಸರತ್ತು ಮಾಡಿ ಹತ್ತಿಪ್ಪತ್ತು ಕುದುರೆ ಕಡಿದವನು**

A) ರಾಮ B) ಭೀಮ

C) ಹನುಮ D) ಜಡಗ

**20) ವಾಲ್ಮೀಕಿ ಋಷಿಗಳು ಲವನಿಗೆ ಹೇಳಿ ಹೋಗಿದ್ದು**

A) ಒಡನಾಡಿಗಳೊಂದಿಗೆ ಆಟವಾಡಲು B) ಯಜ್ಞ ತುರಗವನ್ನು ಕಟ್ಟಲು

C) ಉದ್ಯಾನವನ್ನು ಆರೈಕೆ ಮಾಡಲು D) ರಾಮನ ಗರ್ವವನ್ನು ಬಿಡಿಸಲು

**21) 'ಹಕ್ಕಿ ಹಾರುತಿದೆ ನೋಡಿದಿರಾ' ಪದ್ಯದಲ್ಲಿ ಹಕ್ಕಿ ಕುಕ್ಕಿರುವುದು**

A) ಮನ್ವಂತರಗಳ ಭಾಗ್ಯವನ್ನು

B) ಬೆಳ್ಳಿಯ ಹಳ್ಳಿಯ ಮೇರೆಯನ್ನು

C) ಹೊಸಗಾಲದ ಹಸು ಮಕ್ಕಳನ್ನು

D) ಸಾರ್ವಭೌಮರ ನೆತ್ತಿಯನ್ನು

**22) ಮಾದ್ರಿಯಲೊಂದು ಮಂತ್ರದೊಳುದಿಸಿದ ಇಬ್ಬರು**

A) ಭೀಮ–ದುರ್ಯೋಧನ

B) ನಕುಲ–ಸಹದೇವ

C) ಕರ್ಣ–ಯುಧಿಷ್ಠಿರ

D) ಭೀಮ–ಫಲ್ಗುಣ

**23) ಆಶ್ವಯುಜದ ಭತ್ತದ ಗದ್ದೆಯ ಬಣ್ಣ**

A) ಗಿಳಿ ಹಸುರು

B) ಗುಲಾಬಿ ಕೆಂಪು

C) ಮಲ್ಲಿಗೆ ಬಿಳಿ

D) ಪಡುವಣ ಹಳದಿ

**24) ಛಲವನ್ನೇ ಮೆರೆಯುವುದಾಗಿ ನಿರ್ಧರಿಸಿದವನು**

A) ಭೀಮ

B) ಭೀಷ್ಮ

C) ದುರ್ಯೋಧನ

D) ಧೃತರಾಷ್ಟ್ರ

**25) ವೀರಲವ ಪದ್ಯದಲ್ಲಿ ನಾವು ಮೆಚ್ಚಿಕೊಳ್ಳಬೇಕಾದ ಅಂಶ**

A) ರಾಮನ ಅಣತಿಯಂತೆ ಕುದುರೆಯ ಬೆಂಗಾವಲಿಗೆ ನಿಂತ ಶತ್ರುಘ್ನ

B) ಹಸುರು ಹುಲ್ಲಿಗೆ ಎಳಸಿ ಆಶ್ರಮಕ್ಕೆ ಬಂದ ಕುದುರೆ

C) ಗರ್ವವನ್ನು ಬಿಡಿಸುವೆನೆಂಬ ಲವನ ವೀರತನ

D) ಅರಸರ ಕುದುರೆ ಬಡಿವರೆಮ್ಮನು ಬಿಡು ಎಂಬ ಪಾರ್ವರ ಮಕ್ಕಳು

**26) ಜಿ.ಎಸ್. ಶಿವರುದ್ರಪ್ಪನವರು ಎಚ್ಚರದಲಿ ಮುನ್ನಡೆಸಬೇಕೆಂದಿರುವುದು**

A) ಬಿರುಗಾಳಿಗೆ ಹೊಯ್ದಾಡುವ ಹಡಗನ್ನು

B) ಮನುಜರ ನಡುವಣ ಅಡ್ಡಗೋಡೆಗಳನ್ನು

C) ಭಯ ಸಂಶಯದೊಳು ಕಂದಿದ ಕಣ್ಣುಗಳನ್ನು

D) ಬರಡಾಗಿರುವ ಕಾಡುಮೇಡುಗಳನ್ನು

**27) ವಿವೇಕಾನಂದರನ್ನು 'ಮಾನವತಾಮಿತ್ರ' ಎಂದು ಕರೆದವರು**

A) ದ. ರಾ. ಬೇಂದ್ರೆ

B) ಶಿವರಾಮ ಕಾರಂತ

C) ಕುವೆಂಪು

D) ಜಿ.ಎಸ್. ಶಿವರುದ್ರಪ್ಪ

**28) ಜಲಿಯನ್ ವಾಲಾಬಾಗಿನ ರಕ್ತಸಿಕ್ತವಾಗಿದ್ದ ಮಣ್ಣನ್ನು ನಿಧಿಯಂತೆ ಕಾಪಾಡಿಕೊಂಡು ಬಂದವನು**

A) ರಾಜ್‌ಗುರು

B) ಸುಖ್‌ದೇವ್

C) ಭಗತ್‌ಸಿಂಗ್

D) ಭಟುಕೇಶ್ವರ ದತ್ತ

**29) "ಹೊಲದಲ್ಲಿ ಹುಟ್ಟೋದು ಹೊಲದಲ್ಲಿ ಬೆಳೆಯೋದು**

**ಉಳುವಾನ ಕಂಡು ನಗುವುದು–**

A) ಗರಕೇಯ ಹುಲ್ಲು B) ಉತ್ತರಾಣಿ ಗಿಡ

C) ತಾವರೆ ಬೇರು D) ಬೀಸುಕಲ್ಲು

**30) ಪುಟ್ಟಪೋರಿಯ ಅಮ್ಮ ಮಲಗಿರುವುದು**

A) ಅರಮನೆಯಲ್ಲಿ B) ಒಡೆಯನ ಅಂಗಳದಲ್ಲಿ

C) ಮಾವಿನ ಮರದಡಿಯಲ್ಲಿ D) ಗುಡಿಸಲಿನಲ್ಲಿ

**31) ಕೆಳಗಿನ ಪದಗಳಲ್ಲಿ ಕ್ರಿಯಾ ಸಮಾಸಕ್ಕೆ ಉದಾಹರಣೆ**

A) ಇಮ್ಮಾವು B) ಕಡೆಗಣ್ಣು

C) ಕಣ್ದೆರೆ D) ತಲೆನೋವು

**32) 'ಮಾತಂತು' ಪದವು ಈ ಸಂಧಿಗೆ ಉದಾಹರಣೆಯಾಗಿದೆ**

A) ಅನುನಾಸಿಕ B) ಲೋಪ

C) ವೃದ್ಧಿ D) ಯಣ್

**33) ಹಳಗನ್ನಡದ ದ್ವಿತೀಯಾ ವಿಭಕ್ತಿಯ ಪ್ರತ್ಯಯ**

A) ಮ್ B) ಒಳ್

C) ಅತ್ತಣಿಂ D) ಅಂ

**34) ಕಲಶ ಪದದ ತದ್ಭವ ರೂಪ**

A) ವರುಸ

B) ಅಂಕುಸ

C) ಕಳಸ

D) ಕಲ್ಮಶ

**35) ಹೆತ್ತತಾಯಿ ಹೊತ್ತನಾಡು–ಈ ಗಾದೆಯ ಮುಂದಿನ ಭಾಗ :**

A) ಕುಡಿಕೆ ಹೊನ್ನು ಸಾಲದು

B) ಸ್ವರ್ಗಕ್ಕಿಂತ ಮಿಗಿಲು

C) ಅನಾಚಾರವೇ ನರಕ

D) ಹೊಳೆಯುವುದೆಲ್ಲ ಚಿನ್ನವಲ್ಲ

**36) ಎರಡು ವಸ್ತುಗಳಿಗೆ ಪರಸ್ಪರವಾಗಿ ಇರುವ ಹೋಲಿಕೆಯನ್ನು ಹೇಳುವುದು :**

A) ರೂಪಕಾಲಂಕಾರ

B) ಉಪಮಾಲಂಕಾರ

C) ಉತ್ಪ್ರೇಕ್ಷಾಲಂಕಾರ

D) ದೃಷ್ಟಾಂತಾಲಂಕಾರ

**37) ಯಾವುದಾದರೊಂದು ಕ್ರಿಯೆ ನಡೆದ ರೀತಿಯನ್ನು ಹೇಳುವ ಅವ್ಯಯಗಳನ್ನು ಹೀಗೆನ್ನುತ್ತೇವೆ**

A) ಅವಧಾರಣಾರ್ಥಕಾವ್ಯಯ

B) ಅನುಕರಣಾವ್ಯಯ

C) ಸಾಮಾನ್ಯಾವ್ಯಯ

D) ಕ್ರಿಯಾರ್ಥಕಾವ್ಯಯ

**38) 'ಸಾಮ್ರಾಜ್ಯ' ಪದದಲ್ಲಿ ಕಂಡುಬರುವ ಅಕ್ಷರಗಣ**

A) ಮ ಗಣ

B) ತ ಗಣ

C) ನ ಗಣ

D) ಸ ಗಣ

**39) ಒಂದು ಪದವನ್ನೋ ವಾಕ್ಯವನ್ನೋ ಹೇಳಿ ಅದಕ್ಕೆ ಸಮನಾರ್ಥಕ ಪದವನ್ನೋ ವಾಕ್ಯವನ್ನೋ ಹೇಳುವಾಗ ಬಳಸಬೇಕಾದ ಲೇಖನ ಚಿಹ್ನೆ :**

A) ಉದ್ಧರಣ

B) ಅರ್ಧವಿರಾಮ

C) ಆವರಣ

D) ಅಲ್ಪವಿರಾಮ

**40) ಅಧಿಕಾರಿಗಳಿಗೆ ಪತ್ರವನ್ನು ಬರೆಯುವಾಗ ಆರಂಭದ ಸಂಬೋಧನೆ ಹೀಗಿರಬೇಕು**

A) ಪ್ರೀತಿಯ ಗೆಳೆಯನಿಗೆ

B) ಪೂಜ್ಯ ಗುರುಗಳೇ

C) ಮಾನ್ಯರೇ

D) ತೀರ್ಥರೂಪ

ಕಚ್ಚಾ ಕಾರ್ಯಕ್ಕಾಗಿ/SPACE FOR ROUGH WORK

ಕಚ್ಚಾ ಕಾರ್ಯಕ್ಕಾಗಿ/SPACE FOR ROUGH WORK